# ಟೆಲಿಮೆಡಿಸಿನ್ ಸೇವೆಗಳು

## ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು




ಸಂಕ್ರಾಮಿಕ ಮತ್ತು ಸಾಂಕ್ರಾಮಿಕಮಲ್ಲದ ಕಾಯಿಲೆಗಳೆರಡರ ಭಾರವನ್ನು ಭಾರತ ಎದುರುಸುತ್ತಿದೆ. ಕಳೆದ ಎರಡು ದಶಕಗಳಲ್ಲಿ, ಹೃದಯರಕ್ತನಾಳದ ಸಮಸ್ಯೆಗಳು, ಅಧಿಕ ರಕ್ತದೊತ್ತಡ, ಪಾರ್ಶ್ವವಾಯು ಮತ್ತು ಕ್ಯಾನ್ಸರ್‌ನಂತಹ ಸಾಂಕ್ರಮಿಕವಲ್ಲದ ಕಾಯಿಲೆಗಳ ಹರಡುವಿಕೆಯಲ್ಲಿ ಸ್ಥಿರವಾದ ಏರಿಕೆ ಕಂಡುಬಂದಿದೆ. ಭಾರತದಲ್ಲಿ ಸುಮಾರು ಶೇ 50% ರಷ್ಟು ಸಾವುಗಳು ಸಾಂಕ್ರಮಿಕವಲ್ಲದ ಕಾಯಿಲೆಗಳಿಂದಾಗಿವೆ. ಭಾರತದಲ್ಲಿ ಸುಮಾರು ಶೇ 25% ರಷ್ಟು ಹೃದಯ ಸಂಬಂಧಿ ಕಾಯಿಲೆಗಳು ಸಾವುಗಳಿಗೆ ಕಾರಣವಾಗಿವೆ. ಯುವಕರು ಮತ್ತು ಮಧ್ಯವಯಸ್ಕರ ಈ ಜೀವನಶೈಲಿ ಮತ್ತು ಒತ್ತಡ-ಸಂಬಂಧಿತ ಕಾಯಿಲೆಗಳಿಗೆ ಗುರಿಯಾಗುತ್ತಿದ್ದಾರೆ ಎಂಬುದು ಆತಂಕಕಾರಿ. ಈ ರೋಗಗಳನ್ನು ನಿಯಂತ್ರಿಸಲು ಮತ್ತು ತಡೆಗಟ್ಟಲು ನಮ್ಮ ಆರೋಗ್ಯ ಕಾರ್ಯತಂತ್ರವನ್ನು ಕೇಂದ್ರೀಕರಿಸಬೇಕಾಗುತ್ತದೆ.

ಟರ್ಶಿಯಲ್ ಕೇರ್ ವ್ಯವಸ್ಥೆಯನ್ನು ಸ್ಥಾಪಿಸುವುದರ ಹೊರತಾಗಿ, ಪ್ರಾಥಮಿಕ ಮತ್ತು ದ್ವಿತೀಯ ಆರೋಗ್ಯ ರಕ್ಷಣಾ ತಂತ್ರವನ್ನು ಬಲಪಡಿಸುವುದು ಅತ್ಯಗತ್ಯ. ಮೆಟ್ರೊ ನಗರಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನ, ಪರಿಣತಿ ಮತ್ತು ಗುಣಮಟ್ಟದ ಸೇವೆಗಳನ್ನೊಳಗೊಂಡ ಕೆಲವು ಹೈಟೆಕ್, ಪಂಚತಾರಾ ಆಸ್ಪತ್ರೆಗಳಿದ್ದು ಅವುಗಳಲ್ಲಿ ಎಲ್ಲಾ ವಿಭಾಗಗಳಲ್ಲಿ ಅನುಭವಿ ತಜ್ಞರು ಇರುತ್ತಾರೆ ಆದರೆ, ಸಮಾಜದ ಎಲ್ಲಾ ಭಾಗಗಳಿಗೂ ಮತ್ತು ಎಲ್ಲಾ ವರ್ಗದವರಿಗೂ ಏಕರೂಪದ ಮತ್ತು ಉತ್ತಮ ಗುಣಮಟ್ಟದ ಸೇವೆಗಳನ್ನು ಒದಗಿಸಲು ಇವುಗಳು ಸಾಕಾಗುತ್ತಿಲ್ಲ. ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ಸರ್ಕಾರಿ ಮತ್ತು ಖಾಸಗಿ ವಲಯದ ಅರೋಗ್ಯ ಸೇವೆಗಳನ್ನು ತಲುಪುವ ವ್ಯವಸ್ಥೆಯು ಇನ್ನೂ ಸುಧಾರಿಸುವ ಅವಶ್ಯಕತೆ ಇರುತ್ತದೆ.

ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕ ಇರಬೇಕು ಮತ್ತು ಇದರಿಂದ ಎಲ್ಲಾ ವೈದ್ಯಕೀಯ ತುರ್ತಸ್ಥಿತಿಗಳಿಗೆ ಚಿಕಿತ್ಸೆ ನೀಡಬಹುದು ಮತ್ತು ಇದರಿಂದ ಅಮೂಲ್ಯವಾದ ಸಮಯ, ಪ್ರಯೋಜನಗಳನ್ನು ರೋಗಿಗಳಿಗೆ ತಲುಪಿಸಬಹುದು. ಆಧುನಿಕ-ದಿನಗಳಲ್ಲಿ ತಂತ್ರಜ್ಞಾನವಾದ ಟೆಲಿಮೆಡಿಸನ್ ಅಪ್ಲಿಕೇಶನ್ ಬಳಸುವುದರ ಮೂಲಕ ಯಾವಾಗಲೂ ಅರೆ ನಗರ ಮತ್ತು ಗ್ರಾಮೀಣ ಆಸ್ಪತ್ರೆಗಳು ತೃತೀಯ ಆರೈಕೆ ಆಸ್ಪತ್ರೆಗಳೊಂದಿಗೆ ಸಂಪರ್ಕಿಸಬಹುದು.

ವೈದ್ಯಕೀಯ ವಿಜ್ಞಾನದ ಎಲ್ಲಾ ಶಾಖೆಗಳಲ್ಲಿ ಮತ್ತು ಆರೋಗ್ಯ ವಿತರಣಾ ವ್ಯವಸ್ಥೆಗಳಲ್ಲಿ ಸಾಗರೋತ್ತರ ಬದಲಾವಣೆಯಾಗಿದೆ. ಹೊಸ ಔಷಧಿಗಳ ಆವಿಷ್ಕಾರ, ಇಮೇಜಿಂಗ್ ಗ್ಯಾಜೆಟ್‌ಗಳು, ಶಸ್ತ್ರಚಿಕಿತ್ಸಾ ಮತ್ತು ಮಧ್ಯಸ್ಥಿಕೆಯ ತಂತ್ರಾಂಶಗಳು ಹಾಗೂ ಕಾರ್ಯವಿಧಾನಗಳು, ಕಡಿಮೆ ಆಕ್ರಮಣಕಾರಿಯಾಗಿರುವುದರಿಂದ ನೌಕರರು ಸರಿಯಾದ ಸಮಯಕ್ಕೆ ಆಸ್ಪತ್ರೆಯ ವಾಸ್ತವ್ಯವನ್ನು ಕಡಿಮೆ ಮಾಡಿ ಶೀಘ್ರವಾಗಿ ಕೆಲಸಕ್ಕೆ ಮರಳಬಹುದು. ಇಂದು ಶಸ್ತ್ರಚಿಕಿತ್ಸೆ ಅಗತ್ಯವುಳ್ಳ ಅನೇಕ ಖಾಯಿಲೆಗಳಿಗೆ ಶಸ್ತ್ರಚಿಕಿತ್ಸೆಯಲ್ಲದ ಅಥವಾ ಕಡಿಮೆ ಆಕ್ರಮಣಶೀಲ ವಿಧಾನಗಳು, ಎಂಡೋಸ್ಕೋಪಿಕ್ ಶಸ್ತ್ರಚಿಕಿತ್ಸೆಗಳು, ಆಂಜಿಯೋಪ್ಲಾಸ್ಟಿ, ಸ್ಟೆಂಟಿಂಗ್ ಕಾರ್ಯವಿಧಾನಗಳು, ಡಿವೈಸ್ ಕ್ಲೋಶರ್, ಹೃದಯ ವೈಫಲ್ಯ ಸಾಧನಗಳು ಇತ್ಯಾದಿಗಳಿಂದ ಚಿಕಿತ್ಸೆ ನೀಡಲಾಗುತ್ತಿದೆ.

ಹೃದಯ, ಪ್ಯಾಂಕ್ರೀಯಸ್ (ಮೇದೋಜ್ಜೀರಕ ಗ್ರಂಥಿ), ಬೋನ್‌ಮ್ಯಾರೊ (ಮೂಳೆ ಮಜ್ಜೆ), ಲಿವರ್ (ಯಕೃತ್ತು) ಮತ್ತು ಕಿಡ್ನಿ (ಮೂತ್ರಪಿಂಡ) ಗಳನ್ನು ಒಳಗೊಂಡ ಅಂಗಾಂಗ ಕಸಿ ವೇಗವಾಗಿ ವಿಕಸನಗೊಳ್ಳುತ್ತಿದೆ. ಹೆಚ್ಚಿನ ಚಿಕಿತ್ಸಾ ಕೇಂದ್ರಗಳು ಈಗ ಈ ಕಾರ್ಯವಿಧಾನಗಳನ್ನು ಮಾಡುತ್ತಿವೆ. ಇದರ ಹೊರತಾಗಿಯೂ, ಇತರೆ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದರೆ ನಾವು ಈ ಕ್ಷೇತ್ರದಲ್ಲಿ ಹಿನ್ನಡೆ ಹೊಂದಿದ್ದೇವೆ, ಇದಕ್ಕೆ ಕಾರಣ ಕಡಿಮೆ ತಿಳುವಳಿಕೆ, ತಪ್ಪು ಭಾವನೆಗಳು, ಮೂಢನಂಬಿಕೆಗಳು ಮತ್ತು ಇತರೆ ಕಾರಣಗಳು, ಬೊಜ್ಜು ನಿಯಂತ್ರಿಸುವ ಬ್ಯಾರಿಯಾಟ್ರಿಕ್ ಶಸ್ತ್ರ ಚಿಕಿತ್ಸೆ, ಮೊಣಕಾಲು ಬದಲಿ ಮತ್ತು ಸೊಂಟ ಬದಲಿ ಶಸ್ತ್ರ ಚಿಕಿತ್ಸೆಗಳು ಹೆಚ್ಚಾಗುತ್ತಿವೆ.

## ಡಿಜಿಟಲ್ ಹೆಲ್ತ್‌ಕೇರ್:-

ಟೆಲಿಮೆಡಿಸಿನ್, ಡಿಜಿಟಲೀಕರಣ, ಡಿಜಿಟಲ್ ಹೆಲ್ತ್‌ಕೇರ್, ಮೊಬೈಲ್ ಹೆಲ್ತ್‌ಕೇರ್ ಸೇವೆಗಳು, ಮೆಸೇಜಿಂಗ್ ಅಪ್ಲಿಕೇಶನ್‌ಗಳು, ಆಪ್–ಕ್ಲೌಡ್ ಸಿಸ್ಟಮ್ಸ್, ಸೋಷಿಯಲ್ ಮೀಡಿಯಾ ವೆಬ್‌ಸೈಟ್‌ಗಳು ಇತ್ಯಾದಿಗಳನ್ನು ಸಮಾಲೋಚನೆಗಾಗಿ, ಅನುಸರಣೆ, ವೈದ್ಯಕೀಯ ವರದಿಗಳ ವಿನಿಮಯ ಮತ್ತು ಸಂಪರ್ಕ ಸಾಧ್ಯವಾಗದ ಪ್ರದೇಶಗಳಲ್ಲಿಯೂ ಸಹ ಚಿಕಿತ್ಸೆಯನ್ನು ಸಮನ್ವಯಗೊಳಿಸಲು ಬಳಸಲಾಗುತ್ತದೆ. ಹೋಮ್ ಕೇರ್ ಮತ್ತೊಂದು ಹೊಸ ಕ್ಷೇತ್ರ. ಹಿರಿಯ ನಾಗರೀಕರಿಗೆ ಮತ್ತು ಪದೇ

ಪದೇ ಆಸ್ಪತ್ರೆಗೆ ಹೋಗಲು ಸಾಧ್ಯವಾಗದ ರೋಗಿಗಳಿಗೆ ಡಯಾಗ್ನಾಸ್ಟಿಕ್ ಸೇವೆಗಳನ್ನು ಮನೆ ಬಾಗಿಲಿಗೆ ತಲುಪಿಸಲು ಇದು ಸಹಾಯ ಮಾಡುತ್ತದೆ. ಟೆಲಿಮೆಡಿಸಿನ್-ಆಪ್, ಕ್ಲೌಡ್ ಸಿಸ್ಟಮ್ ವ್ಯವಸ್ಥೆಗಳನ್ನು ಬಳಸುವುದರಿಂದ ಸಣ್ಣ ಚಿಕಿತ್ಸಾಲಯಗಳಲ್ಲಿ ಹಾಗೂ ಪರಿಣತಿಯ ಕೊರತೆಯಿರುವ ತಾಲ್ಲೂಕು ಮತ್ತು ಗ್ರಾಮಾಂತರ ವಲಯದ ಆಸ್ಪತ್ರೆಗಳಲ್ಲಿಯೂ ಸಹ ನಾವು ಆರಂಭಿಕ ಡಯಾಗ್ನಾಸ್ಟಿಸ್ ಮತ್ತು ಹೃದಯಾಘಾತದ ನಿರ್ವಹಣೆಗೆ ಅನುಕೂಲ ಮಾಡಿಕೊಡಬಹುದು. ಇಸಿಜಿ, ಎಕ್ಸರೆ, ಸ್ಕ್ಯಾನ್ ವರದಿಗಳು ಇತ್ಯಾದಿಗಳನ್ನು ತಜ್ಞ ಕೇಂದ್ರಗಳಿಗೆ ವೇಗವಾಗಿ ಕಳುಹಿಸಬಹುದು. ಆರಂಭಿಕ ಚಿಕಿತ್ಸೆಯನ್ನು ಥ್ರೊಂಬೋಲಿಸಿಸ್ ರೂಪದಲ್ಲಿ ನೀಡಬಹುದು ಮತ್ತು ಕೆಲವು ಗಂಟೆಗಳ ಸ್ಥಿರೀಕರಣದ ನಂತರ ಆಂಜಿಯೋಪ್ಲಾಸ್ಟಿ ಸೌಲಭ್ಯಗಳನ್ನು ಹೊಂದಿರುವ ಹತ್ತಿರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ತ್ವರಿತವಾಗಿ ವರ್ಗಾಯಿಸಬಹುದು. ಇದೇ ಪರಿಕಲ್ಪನೆಯು ಇತರೆ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆಯ ತುರ್ತು ಪರಿಸ್ಥಿಗಳಿಗೂ ಅನ್ವಯಿಸುತ್ತದೆ.

## ಸಂಶೋಧನೆಯ ಗಮನ:-

ಶಿಕ್ಷಣ ತಜ್ಞರನ್ನು ಆಕರ್ಷಿಸುವ ಕೆಲವು ಸಂಶೋಧನಾ ಕ್ಷೇತ್ರಗಳೆಂದರೆ ಕ್ಯಾನ್ಸರ್, ಸ್ಟೆಮ್‌ಸೆಲ್ ಗಳು ಲೀಡ್‌ಲೆಸ್ ಪೇಸ್‌ಮೇಕರ್ಸ್, ಸಬ್ಕ್ಯುಟೇನಿಯಸ್ ಐಸಿಡಿ, ಶಸ್ತ್ರಚಿಕಿತ್ಸೆಯಿಲ್ಲದ ಕವಾಟ ಬದಲಿ, ಹೃದಯ ವೈಫಲ್ಯ ಸಾಧನಗಳು, ನರ ವಿಜ್ಞಾನ, ರೊಬೊಟಿಕ್ ಶಸ್ತ್ರಚಿಕಿತ್ಸೆಗಳು, ಆಪರೇಷನ್ ಥಿಯೇಟರ್‌ಗಳಲ್ಲಿ ರೋಡ್ ಮ್ಯಾಪ್ ನ್ಯಾವಿಗೇಷನಲ್ ಸಿಸ್ಟಮ್ ಮತ್ತು ಕಾರ್ಡಿಯಾಕ್ ಕ್ಯಾಥ್ಲಾಬ್, ಇದಲ್ಲದೆ ರೋಗಗಳಿಗೆ ಲಸಿಕೆಗಳು ಉದಾಹರಣೆಗೆ ಹೆಚ್‌ಐವಿ, ಹೆಚ್ 1 ಎನ್ 1, ಸೋಂಕುಗಳು, ಡೆಂಗ್ಯೂ ಮತ್ತು ಅಥರ್‌ಸ್ಲೆರಿಯೋಸಿಸ್.

ಅನುವಂಶಿಕ ಮತ್ತು ಜೀನ್ ಚಿಕಿತ್ಸೆಯು ಸಂಶೋಧಕರು ಆಸಕ್ತಿ ಹೊಂದಿರುವ ಒಂದು ಉತ್ತೇಜಕ ಕ್ಷೇತ್ರವಾಗಿದೆ ಹಾಗೂ ಅಲ್‌ಜೈಮರ್ಸ್ (ಮರೆವಿನ) ಕಾಯಿಲೆಯು ಸಹ ಸಂಶೋಧನೆಯ ಮತ್ತೊಂದು ಕ್ಷೇತ್ರವಾಗಿದೆ.

ಅನೇಕ ಅಳವಡಿಕೆಗಳು, ಸಾಧನಗಳು ಮತ್ತು ಇಮೇಜಿಂಗ್ ಉಪಕರಣಗಳು ದುಬಾರಿಯಾಗಿದೆ. ಅವುಗಳಲ್ಲಿ ಹೆಚ್ಚಿನವುಗಳನ್ನೂ ಆಮದು ಮಾಡಿಕೊಳ್ಳಲಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ತಮ್ಮ ಘಟಕಗಳನ್ನು ಸ್ಥಾಪಿಸಿದರೆ, ಅದು ಕಡಿಮೆ ವೆಚ್ಚದಾಯಕ ಮತ್ತು ಹೆಚ್ಚು ಅನುಕೂಲಕರವಾಗಿರುತ್ತದೆ.

ಮಾಹಿತಿ ತಂತ್ರಜ್ಞಾನವು ಜ್ಞಾನ, ವೈದ್ಯಕೀಯ ಮಾಹಿತಿ, ದತ್ತಾಂಶ ಸಂಗ್ರಹಣೆ ಮತ್ತು ವೈದ್ಯಕೀಯ ದಾಖಲೆಗಳ ಪರಿಶೀಲನೆ ಹಾಗೂ ವಿವಿಧ ತಪಾಸಣೆಗಳು ವಾಸ್ತವಿಕವಾಗಿ ವಿಕಸನಗೊಂಡು

ಸರಳೀಕರಣಗೊಂಡಿದೆ. ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನವನ್ನು ಪರಿಗಣಿಸಿ, ವಿವಿಧ ರೋಗನಿರ್ಣಯದ ಗ್ಯಾಜೆಟ್‌ಗಳು ಮತ್ತು ತಪಾಸಣೆಗಳ ಮೇಲಿನ ಅತಿಯಾದ ಅವಲಂಬನೆ ಆರೋಗ್ಯಕರ ಅಭ್ಯಾಸವಲ್ಲ. ಈ ಪ್ರಕ್ರಿಯೆಯಿಂದ, ನಾವು ಮಾನವೀಯ ಸ್ಪರ್ಶವನ್ನು ಕಳೆದುಕೊಳ್ಳುತ್ತೇವೆ. ಮಾತುಕತೆ, ಸ್ಪರ್ಶ ಮತ್ತು ಚಿಕಿತ್ಸೆಯ ವಿಧಾನಗಳು ಇನ್ನೂ ಪ್ರಶಿಂಸಲ್ಪಡುತ್ತಿದೆ.

ಆಧುನಿಕ ತಾಂತ್ರಿಕತೆಯಿಂದ ಕೂಡಿದ ಡಿಜಿಟಲ್ ತಂತ್ರಜ್ಞಾನವನ್ನು ಸಂವೇದನಾಶೀಲವಾಗಿ ಬಳಸಿದರೆ ಫಲಿತಾಂಶಗಳನ್ನು ಸುಧಾರಿಸಬಹುದಾಗಿರುತ್ತದೆ. ಇದು ಸತ್ಯ, ಡಿಜಿಟಲೀಕರಣದ ಕಾರಣದಿಂದಾಗಿ ಕೆಲವು ವೈದ್ಯರುಗಳು ಹಲವು ಆಸ್ಪತ್ರೆಗಳೊಂದಿಗೆ ಸೇರ್ಪಡೆ ಹೊಂದಿದ್ದು ಕೇವಲ ವರದಿಗಳ ಆಧಾರದ ಮೇಲೆ ಚಿಕಿತ್ಸೆ ನೀಡಲಾಗುತ್ತಿದೆ. ಇದು ಕೆಲವು ಸಂದರ್ಭಗಳಲ್ಲಿ ಅತಿಯಾದ ರೋಗನಿರ್ಣಯ ಮತ್ತು ನಿರ್ವಹಣೆಯೊಂದಿಗೆ ಕೊನೆಗೊಳ್ಳುತ್ತದೆ. ಕೆಲವು ವೈದ್ಯಕೀಯ ಉಪಕರಣಗಳ-ಚಾಲಿತ ವರದಿಗಳ ದೋಷಗಳು ಮತ್ತು ಅತಿಯಾದ ಸೂಕ್ಷ್ಮತೆಯನ್ನೂ ಸಹ ನೆನಪಿನಲ್ಲಿಡಬೇಕು. ಪ್ರಮುಖ ವೈದ್ಯಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವ ಮೊದಲು ದೃಢೀಕರಣಗೊಂಡ ಸಾಕ್ಷ್ಯಗಳು, ರೋಗಿಯ ರೋಗಲಕ್ಷಣಗಳು, ಸಮಗ್ರ ಮೌಲ್ಯಮಾಪನ ಮತ್ತು ವಿಶ್ಲೇಷಣೆಯು ಅಂತಿಮ ವಿಧಾನವಾಗಿರಬೇಕು.

ಟೆಲಿಮೆಡಿಸಿನ್ ಅನ್ನು ದೂರಸಂಪರ್ಕ ಜಾಲಗಳ ಮೂಲಕ ತಲುಪಿಸುವ ಆರೋಗ್ಯ ಸೇವೆ ಎಂದು ವಿಶಾಲವಾಗಿ ವ್ಯಾಖ್ಯಾನಿಸಬಹುದು. ಟೆಲಿಮೆಡಿಸಿನ್ ಎಂದರೆ ರೋಗಿಗಳ ಎಲೆಕ್ಟ್ರಾನಿಕ್ ವೈದ್ಯಕೀಯ ದತ್ತಾಂಶವನ್ನು, ರೋಗ ನಿರ್ಣಯ, ಚಿಕಿತ್ಸೆ ಮತ್ತು ಕ್ಲಿನಿಕಲ್ ಶಿಕ್ಷಣಕ್ಕಾಗಿ ವರ್ಗಾಯಿಸುವುದು

ಇತರೆ ವಿಧಾನಗಳಲ್ಲಿ, ಟೆಲಿಮೆಡಿಸಿನ್ ಕಂಪ್ಯೂಟರ್ ಹಾರ್ಡವೇರ್, ವಿಶೇಷವಾಗಿ ವಿನ್ಯಾಸಗೊಳಿಸಲಾದ ತಂತ್ರಾಂಶ, ವೀಡಿಯೋ ಕಾನ್ಫರೆನ್ಸಿಂಗ್ ಸಿಸ್ಟಮ್, ವೈದ್ಯಕೀಯ ಉಪಕರಣಗಳು ಮತ್ತು ಸಂವಹನ ಮಾಧ್ಯಮಾಗಳ ಏಕೀಕರಣ.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯ ಮೂಲಕ ಆರೋಗ್ಯ ರಕ್ಷಣೆಯ ಹಂಚಿಕೆಯನ್ನು ಸುಲಭಗೊಳಿಸುವ ಪ್ರಕ್ರಿಯೆಯೇ ಟೆಲಿಮೆಡಿಸಿನ್.

## ಟೆಲಿಮೆಡಿಸಿನ್ ಪ್ರಯೋಜನಗಳು:-

- ವಿಶೇಷ ಆರೋಗ್ಯ ಸೇವೆಯನ್ನು ಸಂಪರ್ಕ ಸಾಧ್ಯವಾಗದ ಗ್ರಾಮೀಣ ಮತ್ತು ನಗರ ಪ್ರದೇಶದ ಜನರಿಗೆ ತಲುಪಿಸುವುದು.
- ತಜ್ಞರಿಗೆ ಸುಲಭ ಮತ್ತು ತ್ವರಿತವಾಗಿ ತಲುಪಲಿದೆ.
- ಪ್ರಯಾಣದ ವೆಚ್ಚ ಮತ್ತು ರೋಗಿಗಳಿಗೆ ಸಂಬಂಧಿಸಿದ ವೆಚ್ಚಗಳನ್ನು ಕಡಿತಗೊಳಿಸುತ್ತದೆ.
- ಉತ್ತಮ ಸಂಘಟಿತ ವ್ಯವಸ್ಥೆ ಮತ್ತು ಕಡಿಮೆ ವೆಚ್ಚದ ಆರೋಗ್ಯ ರಕ್ಷಣೆ.
- ಗ್ರಾಮೀಣ ಆರೋಗ್ಯ ವೃತ್ತಿಪರರಿಗೆ ನಿರಂತರ ಶಿಕ್ಷಣ ಮತ್ತು ತರಬೇತಿ.
- ಪ್ರಕರಣಗಳ ಅನುಸರಣೆಯಲ್ಲಿ ಬಹಳ ಉಪಯುಕ್ತವಾಗಿದೆ.
- ಸಾವಿರಾರು ನುರಿತ ತಜ್ಞರನ್ನು ತಕ್ಷಣವೇ ಆರೋಗ್ಯ ತಂಡಕ್ಕೆ ಸೇರಿಸುತ್ತದೆ.

## ಟೆಲಿಮೆಡಿಸಿನ್ ಉದ್ದೇಶಗಳು:-

ರಾಜ್ಯದ ಎಲ್ಲಾ ಭಾಗಗಳಲ್ಲಿ ಟೆಲಿಮೆಡಿಸಿನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಮುಖ್ಯ ಉದ್ದೇಶವೆಂದರೆ ದೂರದ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ರೋಗಿಗಳ ಸಮಾಲೋಚನೆ ನಡೆಸಲು, ಚಿಕಿತ್ಸಾಲಯಗಳು, ಗುಣಪಡಿಸುವ ಕೇಂದ್ರಗಳು, ನರ್ಸಿಂಗ್ ಹೋಂಗಳು, ಆಸ್ಪತ್ರೆಗಳು, ಅನಾರೋಗ್ಯ ಪೀಡಿತರಿಗೆ, ವಯಸ್ಸಾದವರಿಗೆ ಚಿಕಿತ್ಸೆಯನ್ನು ಮತ್ತು ಮುಂತಾದವುಗಳ ಮೇಲ್ವಿಚಾರಣೆಯನ್ನು ಯಾವುದೇ ಜಾತಿ, ಮತ, ಧರ್ಮ ಅಥವಾ ಭಾಷೆಯ ಆಧಾರದ ಮೇಲೆ ತಾರತಮ್ಯವಿಲ್ಲದೆ ಆರೋಗ್ಯ ವ್ಯವಸ್ಥೆಯನ್ನು ಉತ್ತೇಜಿಸಲು ಸಹಾಯಕವಾಗಿರುತ್ತದೆ.

ರೋಗಿಯ ಸ್ನೇಹಿ ಟೆಲಿಮೆಡಿಸಿನ್ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಜನರ ಆರೋಗ್ಯ ಗುಣಾತ್ಮಕ ಅಗತ್ಯಗಳನ್ನು ಪೂರೈಸಲು ಮತ್ತು ಈ ವ್ಯವಸ್ಥೆಯ ಮೂಲಕ ನೀಡಲಾಗುವ ಚಿಕಿತ್ಸೆಯನ್ನು ಆರ್ಥಿಕವಾಗಿ ಕಡಿಮೆಗೊಳಿಸುವುದು.

ಸ್ಪರ್ಧೆಗಳು, ಪ್ರದರ್ಶನಗಳು, ಸೆಮಿನಾರ್‌ಗಳು, ಸಮ್ಮೇಳನಗಳು, ಆರೋಗ್ಯ ರಕ್ಷಣೆ ಇತ್ಯಾದಿಗಳನ್ನು ನಡೆಸಲು ಅಥವಾ ಸಹಾಯ ಮಾಡಲು ಟೆಲಿಮೆಡಿಸಿನ್ ಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ಹಂತಗಳಲ್ಲಿ ಹೊಣೆಗಾರಿಕೆಯನ್ನು ಅತ್ಯುತ್ತಮವಾಗಿಸಲು ಸಹಾಯಕವಾಗಿದೆ.

## ಅವಲೋಕನ:-

ವೈಯುಕ್ತಿಕ ಮತ್ತು ಕುಟುಂಬದ ಇತಿಹಾಸದ ಜೊತೆಗೆ ರೋಗಿಯ ಚಿಕಿತ್ಸಾ ಮಾಹಿತಿಯನ್ನು ಒಳಗೊಂಡಿರುವ ಸಮಗ್ರ ಎಲೆಕ್ಟ್ರಾನಿಕ್ ವೈದ್ಯಕೀಯ ದಾಖಲೆ.

ರೋಗಿಗಳ ವೈದ್ಯಕೀಯ ಡೇಟಾವು ಚಿತ್ರಗಳು, ವಿಡಿಯೋ, ಆಡಿಯೋ ಮತ್ತು ವರದಿಯ ರೂಪದಲ್ಲಿ ಸಂಯೋಜಿಸುತ್ತದೆ.

ಡೇಟಾವನ್ನು ಡಿಜಿಟಲ್ ಕ್ಯಾಮೆರಾ ಅಥವಾ ವೆಬ್ ಕ್ಯಾಮೆರಾ, ಹೈ-ರಸಲ್ಯೂಷನ್ ಸ್ಕ್ಯಾನರ್, ಸಿಡಿ-ರಾಮ್ ಅಥವಾ ವೈದ್ಯಕೀಯ ಸಲಕರಣೆಗಳೊಂದಿಗೆ ಸಂಪರ್ಕ ಸಾಧಿಸಬಹುದು.

ವೈದ್ಯಕೀಯ ಡೇಟಾವನ್ನು ಹೊಂದಿರುವ ರೋಗಿಗಳ ಫೈಲ್ ಅನ್ನು ಸಂಕುಚಿತಗೊಳಿಸಲಾಗುತ್ತದೆ ಮತ್ತು ವಿವಿಧ ಸಂವಹನ ಮಾಧ್ಯಮಗಳ ಮೂಲಕ ವರ್ಗಾಯಿಸಲಾಗುತ್ತದೆ.